ದೂರವಾಣಿ : 080 - 2226347

ಬೆಂ.ಮ.ಪ್ರ.ಪ್ರಾ.

# ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 560 052.

**ಸಂಖ್ಯೆ: STRRPA/TP/CC/272/2018-19** ದಿನಾಂಕ: 07.07.2020.

ಪ್ರಾರಂಭಿಕ ಪ್ರಮಾಣ ಪತ್ರ

ನಮೂನೆ– III

ನಿಯಮ– ೩೫

**ವಿಷಯ:** ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಂಡ್ಲಬೆಲೆ ಗ್ರಾಮದ ಸ.ನಂ.126ರ ಸ್ವತ್ತಿನ ಸಂಖ್ಯೆ: 150200100200320401ರಲ್ಲಿನ 16489.42ಚ.ಮೀ. ವಿಸ್ತೀರ್ಣದ ನಿವೇಶನದಲ್ಲಿ ವಸತಿ ಉಪಯೋಗದ ಕಟ್ಟಡ ನಕ್ಷೆಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 15(1)ರ ಅಡಿಯಲ್ಲಿ ಅನುಮೋದಿಸಿ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:**
1. ಮೆ॥ ಜಿ.ಆರ್. [redacted] ಕನ್ಸ್ಟ್ರಕ್ಷನ್ಸ್ ಇವರ ಮನವಿ ದಿನಾಂಕ:05.07.2018ರ ಅರ್ಜಿ.
2. ಈ ಪ್ರಾಧಿಕಾರಕ್ಕೆ ಪಾವತಿಸಲಾದ ಪರಿಶೀಲನಾ ಶುಲ್ಕ ರೂ. 5,000.00, ಉತ್ತಮತೆ ಶುಲ್ಕ ರೂ. 14,74,400.00 ನಕ್ಷೆ ಶುಲ್ಕ ರೂ. 5,000.00 ಮತ್ತು ಭದ್ರತಾ ಠೇವಣಿ ರೂ. 29,48,800.00 ರಸೀದಿ ಸಂಖ್ಯೆ:2130, ದಿನಾಂಕ:04.07.2020.
3. ಈ ಪ್ರಾಧಿಕಾರಕ್ಕೆ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/03/ಟಿಟಿಪಿ/2015, ದಿನಾಂಕ: 25.02.2020ರನ್ವಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ 1961ರಲ್ಲಿ ಸೆಕ್ಷನ್ 18(ಎ)(1)(i)(ii)(iii)(iv)ರನ್ವಯ ಪಾವತಿಸಲಾದ ಒಟ್ಟು ಮೊತ್ತ ರೂ.27,20,900.00 ರಸೀದಿ ಸಂಖ್ಯೆ:2130, ದಿನಾಂಕ:04.07.2020.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಂಡ್ಲಬೆಲೆ ಗ್ರಾಮದ ಸ.ನಂ.126ರಲ್ಲಿ ಅನುಮೋದನೆಯಾಗಿರುವ ವಸತಿ ಅಭಿವೃದ್ಧಿ ನಕ್ಷೆಯಲ್ಲಿ ವಸತಿ ಉಪಯೋಗದ ತಳ+ನೆಲ ಮತ್ತು 13 ಅಂತಸ್ತುಗಳ 1 ರಿಂದ 8 ವಿಂಗ್‌ಗಳಲ್ಲಿ ವಸತಿ ಘಟಕಗಳು ಹಾಗೂ ವಿಂಗ್ 1 ರಲ್ಲಿನ ನೆಲ, ಮೊದಲನೇ ಮತ್ತು ಎರಡನೇ ಮಹಡಿಗಳಲ್ಲಿ ವಾಣಿಜ್ಯೇತರ ರಿ–ಕ್ರಿಯೇಷನಲ್ ಕ್ಲಬ್ ಒಳಗೊಂಡಂತೆ ಒಟ್ಟು 59125.11ಚ.ಮೀ. ವಿಸ್ತೀರ್ಣದಲ್ಲಿ ಕಟ್ಟಡ ನಿರ್ಮಾಣಕ್ಕೆ ಮೆ॥ ಜಿ.ಆರ್ [redacted] ಕನ್ಸ್ಟ್ರಕ್ಷನ್ಸ್ ಇವರಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 15(1) ರನ್ವಯ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಪ್ರಾರಂಭಿಕ ಪ್ರಮಾಣ ಪತ್ರ ನೀಡಿದೆ.

**ಷರತ್ತುಗಳು**

1) ಇದು ಕಟ್ಟಡ ನಿರ್ಮಾಣದ ಬಗ್ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 15(1)ರಡಿ ನೀಡಲಾಗಿರುವ ಪ್ರಾರಂಭಿಕ ಪ್ರಮಾಣ ಪತ್ರವಾಗಿರುತ್ತದೆ. ಈ ಪ್ರಾರಂಭಿಕ ಪ್ರಮಾಣ ಪತ್ರವು ಮಾಲೀಕತ್ವದ ದೃಢೀಕರಣ/ರುಜುವಾತು ಪತ್ರವಾಗಿರುವುದಿಲ್ಲ.
2) ಸದರಿ ನಿವೇಶನದಲ್ಲಿ ಕಟ್ಟುವ ಕಟ್ಟಡವನ್ನು ಈ ಕಛೇರಿಯಿಂದ ಅನುಮತಿ ನೀಡಿರುವಂತೆ ವಸತಿ ಉಪಯೋಗಕ್ಕೆ ಮಾತ್ರ ಉಪಯೋಗಿಸತಕ್ಕದ್ದು ಮತ್ತು ಕಟ್ಟಡವನ್ನು ಅನುಮೋದಿತ ನಕ್ಷೆಯಂತೆ ನಿರ್ಮಿಸತಕ್ಕದ್ದು.
3) ಕಟ್ಟಡ ನಿರ್ಮಾಣವು ಜಾರಿಯಲ್ಲಿರುವ ವಲಯ ನಿಯಮಾವಳಿಗಳು ಮತ್ತು ಕಟ್ಟಡದ ವಿಧಿಗಳ ನಿಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು.
4) ಈ ಪ್ರಾರಂಭಿಕ ಪ್ರಮಾಣ ಪತ್ರವು ಮಂಜೂರಾದ ದಿನಾಂಕದಿಂದ ಎರಡು ವರ್ಷದವರೆಗೆ ಮಾತ್ರ ಮಾನ್ಯತೆ ಹೊಂದಿರುತ್ತದೆ. ಈ ಅವಧಿ ಮುಗಿದ ನಂತರ ಹೊಸದಾಗಿ ಪ್ರಾರಂಭಿಕ ಪ್ರಮಾಣ ಪತ್ರ ಪಡೆಯದೆ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಹಾಗೂ ಮುಂದುವರೆಸಬಾರದು.

..2..

5) ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳತಕ್ಕದಲ್ಲ ಹಾಗೂ ಕಾರ್ಮಿಕರ ಕಲ್ಯಾಣ ನಿಧಿಗೆ ಪಾವತಿಸಬೇಕಾದ ಶುಲ್ಕವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ಪರವಾನಗಿ ಪಡೆಯುವ ಸಮಯದಲ್ಲಿ ಕಡ್ಡಾಯವಾಗಿ ಪಾವತಿಸತಕ್ಕದ್ದು.

6) ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಮತ್ತು ಏನಾದರೂ ಬದಲಾವಣೆಗಳು ಅವಶ್ಯವಿದ್ದಲ್ಲಿ ಮಾರ್ಪಾಡಿತ ನಕ್ಷೆಗೆ ಮಂಜೂರಾತಿ ಪಡೆದು ಮುಂದುವರೆಸತಕ್ಕದ್ದು.

7) ಅನುಮೋದಿತ ಕಟ್ಟಡ ನಕ್ಷೆಯ ಒಂದು ಪ್ರತಿಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಪ್ರದರ್ಶಿಸತಕ್ಕದ್ದು.

8) ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ರಸ್ತೆಯಲ್ಲಿ ಶೇಖರಣೆ ಮಾಡಬಾರದು. ಈ ರೀತಿ ಮಾಡಿರುವುದು ಕಂಡುಬಂದಲ್ಲಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ರದ್ದುಪಡಿಸಲಾಗುವುದು.

9) ಕಟ್ಟಡ ನಡುಜಾಗ ಪ್ರದೇಶದಲ್ಲಿ ಗಿಡ/ಮರಗಳನ್ನು ಬೆಳಸತಕ್ಕದ್ದು.

10) ಪ್ರಶ್ನಿತ ಜಮೀನಿನಲ್ಲಿನ ನಾಲಾ, ಕಾಲುದಾರಿ, ಬಂಡಿದಾರಿ ಇತ್ಯಾದಿ 'ಬಿ' ಖರಾಬು ಜಮೀನುಗಳನ್ನು ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು, ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ ಮುಂತಾದವುಗಳಿಗೆ ನೀರಿನ ಹರಿಯುವಿಕೆಗೆ ಯಾವುದೇ ರೀತಿಯ ಅಡ್ಡಿ/ತಡೆಗಳನ್ನು ಮಾಡುವಂತಿಲ್ಲ ಹಾಗೂ ಯಾವುದೇ ಮಲಿನ ನೀರನ್ನು ಬಿಡುವಂತಿಲ್ಲ. ನಿವೇಶನದ ಆವರಣದೊಳಗೆ ಮಳೆ ನೀರು ಕೊಯ್ಲನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.

11) ಕಟ್ಟಡದಲ್ಲಿ ಸೋಲಾರ್ ವಾಟರ್ ಹೀಟರ್‌ನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.

12) ಸದರಿ ನಿವೇಶನಕ್ಕೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ತೀರ್ಮಾನಕ್ಕೆ ಬದ್ಧರಾಗಿರತಕ್ಕದ್ದು.

13) ಸದರಿ ನಿವೇಶನದಲ್ಲಿ ಸರ್ಕಾರದ/ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ, ಅಂತಹ ಸಂದರ್ಭದಲ್ಲಿ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಅನುಮೋದಿತ ಕಟ್ಟಡ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

14) ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ತಪ್ಪು ದಾಖಲೆ ಅಥವಾ ಇನ್ನಿತರೆ ಫೋರ್ಜರಿ ದಾಖಲಾತಿಗಳನ್ನು ನೀಡಿರುವುದು ರುಜುವಾತಾದಲ್ಲಿ ಈಗ ನೀಡಿರುವ ಕಟ್ಟಡ ನಕ್ಷೆ ಅನುಮೋದನೆಯು ತನ್ನಿಂದ ತಾನೇ ರದ್ದಾಗುವುದೆಂದು ಪರಿಗಣಿಸತಕ್ಕದ್ದು.

15) ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭಿಸಿವ ಮುನ್ನ ಸಂಬಂಧಿತ ಸ್ಥಳೀಯ ಸಂಸ್ಥೆಯಿಂದ ಪರವಾನಗಿಯನ್ನು ಪಡೆಯತಕ್ಕದ್ದು. ಸಂಬಂಧಿಸಿದ ಇತರ ಎಲ್ಲಾ ಇಲಾಖೆ/ ಮಂಡಳಿಗಳಿಂದ ಅಗತ್ಯ ನಿರಾಕ್ಷೇಪಣಾ ಪತ್ರ/ಅನುಮತಿಯನ್ನು ಪಡೆಯತಕ್ಕದ್ದು.

16) ಪ್ರಸ್ತಾವಿತ ಪ್ರದೇಶದಲ್ಲಿ ವಿಕಲಚೇತನರಿಗೆ ಅನುಕೂಲವಾಗುವಂತೆ ಪಾದಚಾರಿ ಮಾರ್ಗವನ್ನು Lift/Ramp ನಲ್ಲಿ ಎರಡು ಚಕ್ರಗಳ ಖುರ್ಚಿ ಸರಾಗವಾಗಿ ಹೋಗಿಬರುವಂತೆ ಕಡ್ಡಾಯವಾಗಿ ನಿರ್ಮಿಸತಕ್ಕದ್ದು.

17) ಕಟ್ಟಡ ಕಾಮಗಾರಿಗಳನ್ನು ಪ್ರಾರಂಭಿಸುವ ಮುನ್ನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪತ್ರ ಸಂಖ್ಯೆ: PCB/60/CNP/18/H-311, ದಿನಾಂಕ: 21.06.2018, ಅಗ್ನಿಶಾಮಕ ಇಲಾಖೆಯ ಪತ್ರ ಸಂಖ್ಯೆ: KSFES/GBC/1/331 ದಿನಾಂಕ: 31.12.2019, ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ರವರ ಪತ್ರ ಸಂಖ್ಯೆ:HOSU/SOUTH/B/030918/285999 ದಿನಾಂಕ: 09.03.2018, ಹಾಗೂ ಬೆಂಗಳೂರು ವಿದ್ಯುತ್ ಸರಬರಾಜು ಮಂಡಳಿ ರವರ ಪತ್ರ ಸಂಖ್ಯೆ: SEE/RMGC/EE(O)/AEE(O)/18-19/1899 ದಿನಾಂಕ: 04.07.2018 ವಿಧಿಸಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗತಕ್ಕದ್ದು ಮತ್ತು ನಿಬಂಧನೆಗಳನ್ನು ತಪ್ಪದೇ ಪಾಲಿಸತಕ್ಕದ್ದು.

18) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 209 ಬಿಎಂಆರ್ 2016, ದಿನಾಂಕ: 31-03-2017ರ ರೀತ್ಯ ಪತ್ರಿಕೆ, ಮಾಧ್ಯಮ, ಜಾಹೀರಾತು ಪ್ರಕಟಣೆಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. ತಪ್ಪು ಮಾಹಿತಿ ಪ್ರಕಟಿಸದೇ ಅನುಮೋದನೆ ಪಡೆದುಕೊಂಡಿರುವ ಯೋಜನಾ ಪ್ರಾಧಿಕಾರದ ಹೆಸರನ್ನು ಮಾತ್ರ ನಮೂದಿಸತಕ್ಕದ್ದು.

19) ಅನುಮೋದಿತ ನಕ್ಷೆಯ ವಿವರಗಳು ಈ ಕೆಳಕಂಡಂತಿವೆ.

| | | | |
|---|---|---|---|
| i) | ಉಪಯೋಗ: ವಸತಿ | | |
| ii) | ನಡುಜಾಗಗಳು | ವಲಯ ನಿಯಮಾವಳಿಯಂತೆ | ನಕ್ಷೆಯಂತೆ |
| | ಮುಂಭಾಗ | 13.0 ಮೀ. | 13.0 ಮೀ. |
| | ಹಿಂಭಾಗ | 13.0 ಮೀ. | 13.0 ಮೀ. |
| | ಎಡಭಾಗ | 13.0 ಮೀ. | 13.0 ಮೀ. |
| | ಬಲಭಾಗ | 13.0 ಮೀ. | 13.0 ಮೀ. |
| iii) | ನಿವೇಶನದ ವಿಸ್ತೀರ್ಣ | – | 16489.4ಚ.ಮೀ.ಗಳು |
| iv) | ಪ್ಲಿಂತ್ ವಿಸ್ತೀರ್ಣ | – | 4691.85 ಚ.ಮೀ.ಗಳು |
| v) | ಕ್ಷೇತ್ರಾವರಿಸುವಿಕೆ | – | ಶೇ. 18.90% |
| vi) | ಒಟ್ಟು ಫ್ಲೋರ್ ವಿಸ್ತೀರ್ಣ | – | 59125.11 ಚ.ಮೀ.ಗಳು |
| vii) | ಎಫ್.ಎ.ಆರ್. | 2.75 | 2.74 |
| viii) | ವಾಹನ ನಿಲುಗಡೆ | 428 | 428 |
| ix) | ದ್ವಿಚಕ್ರವಾಹನ ನಿಲುಗಡೆ | 1471.25 ಚ.ಮೀ. | 1473.06 ಚ.ಮೀ |
| x) | ರಸ್ತೆ ಮಾರ್ಜಿನ್ | – | – |
| xi) | ಕಟ್ಟಡ ರೇಖೆ | – | – |
| xii) | ಕಟ್ಟಡದ ಎತ್ತರ & ಅಂತಸ್ತುಗಳು | 45.0ಮೀ | 42.20ಮೀ<br>ತಳ+ನೆಲ+13ಅಂತಸ್ತುಗಳು |

20) ಯೋಜನಾ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ನಿಯಮಗಳು/ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

21) ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ/ಅನುಮೋದಿತ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಕೈಗೊಂಡಲ್ಲಿ, ಯೋಜನಾ ಪ್ರಾಧಿಕಾರವು ನೀಡಿರುವ ಅನುಮೋದನೆಯು ತನ್ನಿಂದ ತಾನೇ ಸ್ವಯಂಚಾಲಿತವಾಗಿ ರದ್ದಾಗುತ್ತದೆ.

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 15(4) ರ ಅಡಿಯಲ್ಲಿ ಅಗತ್ಯ ಕ್ರಮ ಜರುಗಿಸಲಾಗುವುದು.

Thippeswamy RK

ಸದಸ್ಯ ಕಾರ್ಯದರ್ಶಿಗಳು 7/7/2020

ಉಪನಗರ ವರ್ತುಲ ರಸ್ತೆ (STRR)

ಯೋಜನಾ ಪ್ರಾಧಿಕಾರ ಹಾಗೂ

ಮಹಾನಗರ ಯೋಜಕರು, ಬೆಂ.ಮ.ಪ್ರ.ಪ್ರಾ,

ಬೆಂಗಳೂರು.

ಇವರಿಗೆ,

ಮೆ॥ ಜಿ.ಆರ್. ಕನ್ಸ್‌ಟ್ರಕ್ಷನ್,

1ನೇ ಮಹಡಿ, 9ನೇ ಮುಖ್ಯರಸ್ತೆ,

4ನೇ ಬ್ಲಾಕ್, ಜಯನಗರ,

ಬೆಂಗಳೂರು-560 041.

## ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಆವರಣ,
ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 560 052.

STRRPA/TP/CC/272/2018-19.

ರಸೀತಿ ನಂ. 2130 ದಿನಾಂಕ : 4/7/2020

ಶ್ರೀಮತಿ / ಶ್ರೀ ..... ಎಂ/ಸ್ ಜೆ. ಆರ್. ಕನ್ಸ್ಟ್ರಕ್ಷನ್ಸ್ .....

ರವರಿಂದ ಡಿ.ಡಿ. 057694 057698 057692 9/6/20 057693 057691 057878 9/6/20 ರೂ. 71,65,400.00

| | | |
|---|---|---|
| 1. | ಅರ್ಜಿ ಶುಲ್ಕ | ರೂ. ——— |
| 2. | ಪರಿಶೀಲನಾ ಶುಲ್ಕ | ರೂ. 5000-00 |
| 3. | ಉತ್ತಮತೆ ಶುಲ್ಕ | ರೂ. 14,78,200-00 |
| 4. | ಕೆರೆ ಸಂರಕ್ಷಣಾ ಶುಲ್ಕ | ರೂ. ——— |
| 5. | ಅಭಿವೃದ್ಧಿ ಶುಲ್ಕ | ರೂ. ——— |
| 6. | ಉಸ್ತುವಾರಿ ಶುಲ್ಕ | ರೂ. ——— |
| 7. | ನೀರು ಸರಬರಾಜು ಯೋಜನೆ ಸೆಸ್ | ರೂ. 5,44,200-00 |
| 8. | ವರ್ತುಲ ರಸ್ತೆ ನಿರ್ಮಾಣದ ಸರ್‌ಚಾರ್ಜ್ | ರೂ. 5,44,200-00 |
| 9. | ಕೊಳಗೇರಿ ಅಭಿವೃದ್ಧಿ ಸೆಸ್ | ರೂ. 2,72,100-00 |
| 10. | ಎಂ.ಆರ್.ಟಿ.ಎಸ್. ಸರ್‌ಚಾರ್ಜ್ | ರೂ. 13,60,400-00 |
| 11. | ಪ್ರಕಟಣೆ ಶುಲ್ಕ | ರೂ. ——— |
| 12. | ಹೆಚ್ಚುವರಿ ಪ್ರತಿ ಶುಲ್ಕ | ರೂ. 5000-00 |
| 13. | ಇತರೆ ಶುಲ್ಕ ( [illegible] | ರೂ. 29,56,300-00 |
| | ಒಟ್ಟು ರೂ. | ರೂ. 71,65,400-00 |

ರೂ. ಎಪ್ಪತ್ತೊಂದು ಲಕ್ಷದ ಅರವತ್ತೈದು ಸಾವಿರದ ನಾಲ್ಕು ನೂರು ಮಾತ್ರ ಗಳು ಸಂದಾಯವಾಗಿರುತ್ತದೆ.

[illegible signature]
ಸದಸ್ಯ ಕಾರ್ಯದರ್ಶಿಗಳು
ಪರವಾಗಿ.